# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ಮೊದಲನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110

ದೂ. : 080–29566001, 080–27682035 ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in


ಸಂ. ಬಿಐಎಎಪಿಎ/ಟಿಪಿ/ಸಿಸಿ/524/2024–25/2025–26 / 1206 ದಿನಾಂಕ: 19 JUL 2025

## "ಪ್ರಾರಂಭಿಕ ಪ್ರಮಾಣ ಪತ್ರ"

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 15(1) ರನ್ವಯ)
(ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ ನಿಯಮಗಳ 1965 ರ ನಿಯಮ 30 ನಮೂನೆ 3 ರನ್ವಯ)

ವಿಷಯ: ಯಲಹಂಕ ತಾಲ್ಲೂಕು, ಜಾಲ ಹೋಬಳಿ, ನವರತ್ನ ಅಗ್ರಹಾರ ಗ್ರಾಮದ ಸರ್ವೆ ನಂ. 17/2 ರಲ್ಲಿ 1ಎ–0ಗು & 127 ರಲ್ಲಿ 0ಎ–22ಗು ಒಟ್ಟು 1ಎ–22ಗು ಅಥವಾ 6272.54 ಚ.ಮೀ ವಿಸ್ತೀರ್ಣ ಪ್ರದೇಶಕ್ಕೆ ಅನುಮೋದಿತ ವಸತಿ ಉಪಯೋಗದ ಏಕ ನಿವೇಶನ ವಿನ್ಯಾಸ ನಕ್ಷೆಯ ಪ್ರದೇಶದಲ್ಲಿನ ಖಾತಾ ಸಂಖ್ಯೆ: 1209/17/2/1210/127 (ಪಿಐಡಿ ಸಂಖ್ಯೆ: 150200200900420061) ರಲ್ಲಿ Stilt + G + 03 UF ಗಳನ್ನು ಒಳಗೊಂಡ 71 ವಸತಿ ಘಟಕಗಳ ಕಟ್ಟಡಗಳನ್ನು ನಿರ್ಮಿಸಲು ಕಟ್ಟಡ ನಕ್ಷೆಗಳಿಗೆ ಅನುಮೋದನೆ ನೀಡಿ ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ಕೋರಿ ಸಲ್ಲಿಸಿರುವ ಅರ್ಜಿಯ ಬಗ್ಗೆ.

ಉಲ್ಲೇಖ:
1) ಈ ಪ್ರಾಧಿಕಾರದಿಂದ ಏಕನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿದ ಆದೇಶ ಪತ್ರ ಸಂಖ್ಯೆ: ಬಿಐಎಎಪಿಎ/ಟಿಪಿ1/ಏನಿ/ಎಲ್ಎಒ/04/2014–15/2107, ದಿನಾಂಕ: 10/09/2014.
2) ಅರ್ಜಿದಾರರ ಅರ್ಜಿ ದಿನಾಂಕ ಹಾಗೂ ಮನವಿ ಪತ್ರ ದಿನಾಂಕ: 13/03/2025 & 23/04/2025.
3) ಈ ಕಛೇರಿ ಸಮ ಸಂಖ್ಯೆಯ ಶುಲ್ಕ ಪಾವತಿ ಸೂಚನಾ ಪತ್ರ ದಿನಾಂಕ: 27/06/2025.
4) ಪ್ರಾಧಿಕಾರಕ್ಕೆ ಶುಲ್ಕವನ್ನು ಪಾವತಿಸಿರುವ ವಿವರ : ಅರ್ಜಿದಾರರು ಶುಲ್ಕಗಳನ್ನು ಪಾವತಿಸಿದ ರಶೀದಿ ಸಂಖ್ಯೆ 0014774 ದಿನಾಂಕ: 11/07/2025 ರಲ್ಲಿ ರೂ. 12,03,960/– (ಹನ್ನೆರಡು ಲಕ್ಷದ ಮೂರು ಸಾವಿರದ ಒಂಬೈನೂರ ಅರವತ್ತು ರೂಪಾಯಿಗಳು ಮಾತ್ರ) ಗಳನ್ನು ಪಾವತಿಸಿರುತ್ತಾರೆ.

* * * * *

ಶ್ರೀ ಕೆ. ವೆಂಕಟೇಶ್ ಬಿನ್ ಲೇ॥ ಎಂ. ಕೃಷ್ಣಾರೆಡ್ಡಿ ರವರು ಯಲಹಂಕ ತಾಲ್ಲೂಕು, ಜಾಲ ಹೋಬಳಿ, ನವರತ್ನ ಅಗ್ರಹಾರ ಗ್ರಾಮದ ಸರ್ವೆ ನಂ. 17/2 ರಲ್ಲಿ 1ಎ–0ಗು & 127 ರಲ್ಲಿ 0ಎ–22ಗು ಒಟ್ಟು 1ಎ–22ಗು ಅಥವಾ 6272.54 ಚ.ಮೀ ವಿಸ್ತೀರ್ಣ ಪ್ರದೇಶಕ್ಕೆ ಅನುಮೋದಿತ ವಸತಿ ಉಪಯೋಗದ ಏಕ ನಿವೇಶನ ವಿನ್ಯಾಸ ನಕ್ಷೆಯ ಪ್ರದೇಶದಲ್ಲಿನ ಖಾತಾ ಸಂಖ್ಯೆ: 1209/17/2/1210/127 (ಪಿಐಡಿ ಸಂಖ್ಯೆ: 150200200900420061) ರಲ್ಲಿ Stilt + G + 03 UF ಗಳನ್ನು ಒಳಗೊಂಡ 71 ವಸತಿ ಘಟಕಗಳ ಕಟ್ಟಡಗಳನ್ನು ನಿರ್ಮಿಸಲು ಕಟ್ಟಡ ನಕ್ಷೆಗಳಿಗೆ ಅನುಮೋದನೆ ನೀಡಿ ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ಕೋರಿ ಉಲ್ಲೇಖ (2) ರಂತೆ ಅರ್ಜಿ ಸಲ್ಲಿಸಲಾಗಿತ್ತು. ಉಲ್ಲೇಖ (3) ರಲ್ಲಿನ ಈ ಕಛೇರಿ ಶುಲ್ಕ ಪಾವತಿ ಸೂಚನಾ ಪತ್ರದಲ್ಲಿ ಅಗತ್ಯ ಶುಲ್ಕಗಳನ್ನು ಪಾವತಿಸಲು ಹಾಗೂ ಪ್ರಸ್ತಾವಿತ ನಿವೇಶನಕ್ಕೆ ಸಂಬಂಧಿಸಿದಂತೆ ಚಾಲ್ತಿ ಸಾಲಿನ ಇ.ಸಿ. ನಮೂನೆ – 15 ರ ಪ್ರತಿ, ಚಾಲ್ತಿ ಸಾಲಿನಲ್ಲಿ ಕಂದಾಯ ಪಾವತಿಸಿರುವ ಬಗ್ಗೆ ಕಂದಾಯ ಪಾವತಿ ರಶೀದಿ & ಪ್ರಸ್ತಾವಿತ ಕಟ್ಟಡದ ಎತ್ತರದ ಸಂಬಂಧ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾರವರಿಂದ ಪಡೆದಿರುವ ನಿರಾಕ್ಷೇಪಣಾ ಪತ್ರದೊಂದಿಗೆ ಉದ್ದೇಶಿತ ಕಟ್ಟಡದ ನಕ್ಷೆಯ ನೀಲಿ ಪ್ರತಿಗಳನ್ನು ಅರ್ಜಿದಾರರು/ಅಭಿಯಂತರರ ಸಹಿಗಳೊಂದಿಗೆ ಸಲ್ಲಿಸಲು ಸೂಚಿಸಲಾಗಿತ್ತು.

ಉಲ್ಲೇಖ (4) ರಲ್ಲಿ ಅರ್ಜಿದಾರರು ನಿಗಧಿತ ಶುಲ್ಕಗಳನ್ನು ಪ್ರಾಧಿಕಾರಕ್ಕೆ ಪಾವತಿಸಿ, ಅಗತ್ಯ ದಾಖಲೆಗಳೊಂದಿಗೆ ಉದ್ದೇಶಿತ ಕಟ್ಟಡದ ನಕ್ಷೆಯ ನೀಲಿ ಪ್ರತಿಗಳನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. ಆದ್ದರಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಗಿನ ನಿಬಂಧನೆಗಳೊಂದಿಗೆ ನೀಡಲಾಗಿದೆ.

## ನಿಬಂಧನೆಗಳು

1. ಈ ಪ್ರಾಧಿಕಾರದಿಂದ ಏಕನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿದ ಆದೇಶ ಪತ್ರ ಸಂಖ್ಯೆ: ಬಿಐಎಪಿಎ/ಟಿಪಿ1/ಏನಿ/ಎಲ್ಎಒ/04/2014-15/2107, ದಿನಾಂಕ: 10/09/2014 ರ ಆದೇಶದಲ್ಲಿ ವಿಧಿಸಲಾಗಿರುವ ಎಲ್ಲಾ ಷರತ್ತುಗಳಿಗೆ ಅರ್ಜಿದಾರರು ಬದ್ಧರಾಗಿರತಕ್ಕದ್ದು.
2. ಯೋಜಿಸಿರುವ ಕಟ್ಟಡವನ್ನು 'ವಾಸದ' ಉದ್ದೇಶಕ್ಕಾಗಿಯೇ ಉಪಯೋಗಿಸಬೇಕು.
3. ಈ ಪ್ರಾರಂಭಿಕ ಪ್ರಮಾಣ ಪತ್ರವನ್ನು ಎರಡು ವರ್ಷದ ಅವಧಿಗೆ ಅಂದರೆ **ದಿನಾಂಕ: 19/07/2025 ರಿಂದ 18/07/2027 ರವರೆಗೆ** ಮಾತ್ರ ನೀಡಲಾಗಿರುತ್ತದೆ.
4. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಪ್ರಕಾರ ಇದು ಪ್ರಾರಂಭಿಕ ಪ್ರಮಾಣ ಪತ್ರವಾಗಿದ್ದು, ಈ ಪತ್ರದ ಅಧಾರದ ಮೇಲೆ ಅವಶ್ಯಕ ಇತರೆ ಪರವಾನಿಗೆಯನ್ನು **ದೊಡ್ಡಜಾಲ ಗ್ರಾಮ** ಪಂಚಾಯ್ತಿರವರಿಂದ ಪಡೆಯದೇ ಅಭಿವೃದ್ಧಿ ಕಾರ್ಯ ಕೈಗೊಳ್ಳಬಾರದು.
5. ಕಟ್ಟಡ ನಿರ್ಮಿಸಲು ಪರವಾನಿಗೆಯನ್ನು **ದೊಡ್ಡಜಾಲ ಗ್ರಾಮ** ಪಂಚಾಯ್ತಿಯಿಂದ ಪಡೆಯಬೇಕು.
6. ಕಟ್ಟಡವನ್ನು ಹಾಲಿ ಇರುವ ವಲಯ ನಿಯಮಾವಳಿ ಹಾಗೂ ಕಟ್ಟಡದ ವಿಧಿಯ ಪ್ರಕಾರ ನಿರ್ಮಿಸಬೇಕು. ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಈ ಪ್ರಾರಂಭಿಕ ಪ್ರಮಾಣ ಪತ್ರದ ಮೂಲಕ ಅನುಮೋದಿಸಿರುವ ನಕ್ಷೆಯಂತೆಯೇ ಕೈಗೊಳ್ಳಬೇಕು. ಬೆಳವಣಿಗೆಯಲ್ಲಿನ ಯಾವುದೇ ಬದಲಾವಣೆಯನ್ನು ಈ ಕಛೇರಿಯ ಪೂರ್ವಾನುಮತಿ ಪಡೆಯದೇ ಮಾಡತಕ್ಕದ್ದಲ್ಲ.
7. 'ವಸತಿ' ಉಪಯೋಗಕ್ಕೆ ಕಟ್ಟಡ ನಿರ್ಮಿಸಲು ನಕ್ಷೆಯಲ್ಲಿ ಬಿಟ್ಟಿರುವಂತೆ ನಡುಜಾಗವನ್ನು ಬಿಟ್ಟು ಕಟ್ಟಡ ನಿರ್ಮಿಸತಕ್ಕದ್ದು.
8. ಕಟ್ಟಡದ ಮತ್ತು ಯಾವುದೇ ಅಭಿವೃದ್ಧಿಯ ತಳಪಾಯ, ಅಗ್ನಿಶಾಮಕ ವ್ಯವಸ್ಥೆ ಹಾಗೂ ಇತರ ಭದ್ರತಾ ವ್ಯವಸ್ಥೆಗಳು ಅರ್ಜಿದಾರರ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ. ಈ ಸಂಬಂಧ ಯಾವುದೇ ಅನಾಹುತಗಳಿಗೆ ಈ ಪ್ರಮಾಣ ಪತ್ರ ಬದ್ಧವಲ್ಲ ಹಾಗೂ ಪ್ರಾಧಿಕಾರವು ಜವಾಬ್ದಾರರಾಗುವುದಿಲ್ಲ.
9. ಕಟ್ಟಡ ಭದ್ರತೆಯ ಕುರಿತು ನುರಿತ (Structural Engineer) ತಜ್ಞರಿಂದ Structural Details ಪಡೆದು ಅದರಂತೆ ನಿರ್ವಹಿಸುವುದು ಹಾಗೂ ಅವಶ್ಯಕ ಮುಂಜಾಗ್ರತೆಗಳನ್ನು ಕೈಗೊಳ್ಳತಕ್ಕದ್ದು. ಈ ಕುರಿತು ಪ್ರಾಧಿಕಾರಕ್ಕೆ ಯಾವುದೇ ಜವಾಬ್ದಾರಿ ಇರುವುದಿಲ್ಲ.
10. ಪ್ರಸ್ತಾವನೆ ಸಂಬಂಧ ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾರವರ ಪತ್ರ ಸಂಖ್ಯೆ: ಬಿಐಎಎಲ್/ಸೌತ್/ಬಿ/041825/1659444, ದಿನಾಂಕ: 28/05/2025 ರಂದು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
11. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರ ಪತ್ರ ಸಂಖ್ಯೆ: Consent Order No. CTE-130824, Date: 09/04/2025 ರ ಪತ್ರದಲ್ಲಿ ವಿಧಿಸಲಾಗಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
12. ಕಾಮಗಾರಿಗಳಿಂದಾಗಿ ಪರಿಸರವು ಮಾಲಿನ್ಯವಾಗದಂತೆ ಎಚ್ಚರಿಕೆ ವಹಿಸತಕ್ಕದ್ದು ಮತ್ತು ಸ್ವಾಭಾವಿಕ ಮಳೆಯ ನೀರು ಇಂಗಿ ಹೋಗಲು ವ್ಯವಸ್ಥೆ (Rain Water harvesting) ಯನ್ನು ಮಾಡತಕ್ಕದ್ದು ಮತ್ತು ಸೌರಶಕ್ತಿ ವ್ಯವಸ್ಥೆಯನ್ನು ಕಟ್ಟಡದಲ್ಲಿ ಒದಗಿಸತಕ್ಕದ್ದು ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ನಿವೇಶನದ ಮುಂಭಾಗದಲ್ಲಿ ಗಿಡ/ಮರವನ್ನು ಬೆಳೆಸತಕ್ಕದ್ದು.
13. ಈ ಪ್ರಮಾಣ ಪತ್ರ ನೀಡಿರುವ ಮಾತ್ರಕ್ಕೆ ಯಾವುದೇ ಸೌಲಭ್ಯವನ್ನು ಅರ್ಜಿದಾರರಿಗೆ ನೀಡುವ ಹೊಣೆಗಾರಿಕೆ ಪ್ರಾಧಿಕಾರಕ್ಕಿರುವುದಿಲ್ಲ.
14. ಈ ಪ್ರಾರಂಭಿಕ ಪ್ರಮಾಣ ಪತ್ರದೊಡನೆ ಅನುಮೋದಿಸಲ್ಪಟ್ಟಿರುವ ನಕ್ಷೆಯು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು.

# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ಮೊದಲನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110

ದೂ. : 080–29566001, 080–27682035 ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in


15. ಪ್ರಶ್ನಿತ ನಿವೇಶನದಲ್ಲಿ ಉದ್ದೇಶಿಸಿರುವ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳಬಾರದು.
16. ಈ ಪ್ರಾಧಿಕಾರದ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು ಹಾಗೂ ಸಂಪರ್ಕ ರಸ್ತೆಯ ಬಗ್ಗೆ ಯಾವುದೇ ತಕರಾರು ಬಂದರೂ ಈ ಪ್ರಾಧಿಕಾರವು ಹೊಣೆಯಲ್ಲ ಮತ್ತು ನೀವೇ ಸ್ವಂತ ಜವಾಬ್ದಾರಿಯಿಂದ ಬಗೆಹರಿಸಿಕೊಳ್ಳತಕ್ಕದ್ದು.
17. ಈ ಅನುಮತಿಯನ್ನು ಉಲ್ಲಂಘಿಸಿ ಅಭಿವೃದ್ಧಿಯನ್ನು ಕೈಗೊಂಡರೆ ಅಥವಾ ನೀಡಿರುವ ಮಾಹಿತಿಗಳು ದೋಷ ಪೂರ್ಣವಾಗಿದ್ದರೆ ಅನುಮತಿಯನ್ನು ಹಿಂತೆಗೆದುಕೊಳ್ಳಲಾಗುವುದಲ್ಲದೇ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಅನ್ವಯ ಕ್ರಮ ತೆಗೆದುಕೊಳ್ಳಲಾಗುವುದು.
18. ಪ್ರಶ್ನಿತ ನಿವೇಶನದ ಪ್ರದೇಶವು ಅಂತರಾಷ್ಟ್ರೀಯ ವಾಯು ನೆಲೆಯ ಪರಿಸರದಲ್ಲಿ ಬರುವುದರಿಂದ ಶಬ್ದಮಾಲಿನ್ಯ ಸಹಿಸಿಕೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.
19. ಇತರೆ ಇಲಾಖೆಗಳಿಂದ ಅಗತ್ಯವಿರುವ ಅನುಮತಿ/ನಿರಾಕ್ಷೇಪಣಾ ಪತ್ರಗಳನ್ನು ಸಹ ಪಡೆಯತಕ್ಕದ್ದು.
20. ಅರ್ಜಿದಾರರು ಸಲ್ಲಿಸಿರುವ ಮಾಹಿತಿ/ದಾಖಲಾತಿಗಳು ಸುಳ್ಳು ಅಥವಾ ಫೋರ್ಜರಿಗಳಾಗಿದ್ದರೆ ಈ ಕಛೇರಿಯಿಂದ ನೀಡಿರುವ ಪ್ರಾರಂಭಿಕ ಪ್ರಮಾಣ ಪತ್ರವು ತಂತಾನೆ ರದ್ದಾಗುತ್ತದೆ

19/07/2020

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಬೆಂಗಳೂರು ಅಂತರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ

ಇವರಿಗೆ:

**ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು,**
ದೊಡ್ಡಜಾಲ ಗ್ರಾಮ ಪಂಚಾಯಿತಿ
ಜಾಲ ಹೋಬಳಿ,
ಯಲಹಂಕ ತಾಲ್ಲೂಕು,
ಬೆಂಗಳೂರು ನಗರ ಜಿಲ್ಲೆ

ಕಟ್ಟಡ ನಕ್ಷೆಯ 4 ಪ್ರತಿಗಳೊಂದಿಗೆ ಮುಂದಿನ ಕ್ರಮಕ್ಕಾಗಿ ರವಾನಿಸಲಾಗಿದೆ.

ಪ್ರತಿಯನ್ನು:

1. **ಕಾರ್ಯದರ್ಶಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ,** ನಂ. 1/14, 2 ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ ಕಾಂಪೌಂಡ್, 3 ನೇ ಕ್ರಾಸ್ ಮಿಷನ್ ರಸ್ತೆ, ಬೆಂಗಳೂರು–560027 ಇವರ ಮಾಹಿತಿಗಾಗಿ ಕಳುಹಿಸಿದೆ.
2. **ಶ್ರೀ ಕೆ. ವೆಂಕಟೇಶ್ ಬಿನ್ ಲೇ॥ ಎಂ. ಕೃಷ್ಣಾರೆಡ್ಡಿ,** ನಂ. 3417, 3ನೇ ಕ್ರಾಸ್, 10ನೇ ಮೈನ್, ಇಂದಿರಾನಗರ, ಬೆಂಗಳೂರು–560038 ರವರ ಮಾಹಿತಿಗಾಗಿ.
3. **ಕಛೇರಿ ಪ್ರತಿ.**